ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 22/03/2019

# ಸಮ್ಮಿಶ್ರ ಸರ್ಕಾರ ಉಳಿಸಲು ಸುಳ್ಳು ಹೇಳಿದ್ದೆ
# ₹30 ಕೋಟಿ ಆಮಿಷ ಸುಳ್ಳು

ವಿಜಯವಾಣಿ ಸುದ್ದಿಜಾಲ ಬೆಂಗಳೂರು 22/3

ಬಿಜೆಪಿ ಮುಖಂಡರು 30 ಕೋಟಿ ರೂ. ಆಮಿಷ ಒಡ್ಡಿದ್ದರು ಎಂದು ಸುಳ್ಳು ಹೇಳಿಕೆ ನೀಡಿದ್ದಾಗಿ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ದ ಮುಂದೆ ಕೋಲಾರ ಜೆಡಿಎಸ್ ಶಾಸಕ ಶ್ರೀನಿವಾಸಗೌಡ ಹೇಳಿಕೆ ನೀಡಿದ್ದಾರೆ.



» ಎಸಿಬಿ ಮುಂದೆ ತಪ್ಪೊಪ್ಪಿಕೊಂಡ ಶಾಸಕ ಶ್ರೀನಿವಾಸ ಗೌಡ

ಆಪರೇಷನ್ ಕಮಲಕ್ಕಾಗಿ ಬಿಜೆಪಿ ಆಮಿಷ ಒಡ್ಡಿತ್ತೆನ್ನಲಾದ ಪ್ರಕರಣ ಸಂಬಂಧ ಮಾ.18ರಂದು ಎಸಿಬಿ ವಿಚಾರಣೆಗೆ ಹಾಜರಾಗಿದ್ದ ಶ್ರೀನಿವಾಸಗೌಡ, 'ನಾನು ಶೌಚಗೃಹಕ್ಕೆ ಹೋಗಿದ್ದಾಗ ಬಿಜೆಪಿ ಮುಖಂಡರು ಮನೆಗೆ ಬಂದು 5 ಕೋಟಿ ರೂ. ಇಟ್ಟು ಹೋಗಿದ್ದರು' ಎಂದು ಹೇಳಿಕೆ ನೀಡಿದ್ದರು. ಆದರೆ, ಗುರುವಾರ ವಿಚಾರಣೆಗೆ ಹಾಜರಾಗಿ ಉಲ್ಟಾ ಹೊಡೆದಿದ್ದಾರೆ. ಈ ಹಿಂದೆ ಹೇಳಿದ್ದು, ಸುಳ್ಳು. ಈಗ ಹೇಳುವುದು ನನ್ನ ಅಧಿಕೃತ ಹೇಳಿಕೆ ಎಂದು ಸ್ಪಷ್ಟಪಡಿಸಿದ್ದಾರೆ.

ಆಪರೇಷನ್ ಕಮಲದಿಂದ ರಾಜ್ಯ ಸಮ್ಮಿಶ್ರ ಸರ್ಕಾರವನ್ನು ಬಚಾವ್ ಮಾಡಬೇಕಾಗಿತ್ತು. ಅದಕ್ಕಾಗಿ ಅಂದು ಬಿಜೆಪಿ ಮುಖಂಡರಿಬ್ಬರು ನನಗೆ 30 ಕೋಟಿ ರೂ. ಆಮಿಷವೊಡ್ಡಿದ್ದರು. ಮನೆಗೆ ಬಂದು 5 ಕೋಟಿ ರೂ. ಇಟ್ಟು, ಉಳಿದ 25 ಕೋಟಿ ರೂ. ನಂತರ ಕೊಡುವುದಾಗಿ ಹೇಳಿದ್ದರು ಎಂದು ಮಾಧ್ಯಮಗಳ ಎದುರು ಹೇಳಿದ್ದೆ. ನನ್ನ ಹೇಳಿಕೆಯಿಂದಾಗಿ ಆಪರೇಷನ್ ಕಮಲ ನಿಂತಿದೆ. ಸಮ್ಮಿಶ್ರ ಸರ್ಕಾರಕ್ಕಿದ್ದ ಅಪಾಯವೂ ತಪ್ಪಿದೆ' ಎಂದು ಶಾಸಕರು ಹೇಳಿಕೆ ದಾಖಲಿಸಿದ್ದಾರೆ. ಹೀಗಾಗಿ, ದೂರಿನಲ್ಲಿ ಆರೋಪಿತರೆಂದು ಹೇಳಲಾದವರನ್ನು ಕರೆಸಿ ಹೇಳಿಕೆ ದಾಖಲಿಸಿಕೊಳ್ಳುವುದಾಗಿ ಎಸಿಬಿ ಮೂಲಗಳು ತಿಳಿಸಿವೆ. ಶ್ರೀನಿವಾಸಗೌಡ ಜತೆ ಅವರ ಪುತ್ರ ಕೂಡ ಎಸಿಬಿಗೆ ಹಾಜರಾಗಿದ್ದರು.

## ಅಂದು ಹೇಳಿದ್ದೇನು?

**ಬಿಜೆಪಿ ಮುಖಂಡ ಸಿ.ಪಿ ಯೋಗೀಶ್ವರ, ಶಾಸಕರಾದ ಎಸ್.ಆರ್ ವಿಶ್ವನಾಥ ಮತ್ತು ಅಶ್ವತ್ಥನಾರಾಯಣ ನನ್ನನ್ನು ಪಕ್ಷಕ್ಕೆ ಆಹ್ವಾನಿಸಿ ಹಣದ ಆಮಿಷವೊಡ್ಡಿದ್ದಾಗಿ ಫೆಬ್ರವರಿಯಲ್ಲಿ ಶ್ರೀನಿವಾಸಗೌಡ ಹೇಳಿದ್ದರು. ಆ ಹೇಳಿಕೆ ಕುರಿತು ವಿಚಾರಣೆ ನಡೆಸುವಂತೆ ಸಾಮಾಜಿಕ ಕಾರ್ಯಕರ್ತ ಟಿ.ಜಿ. ಅಬ್ರಹಾಂ ಹಾಗೂ ಇನ್ನಿತರರು ಎಸಿಬಿಗೆ ದೂರು ನೀಡಿದ್ದರು.**